ನಂತರ ಮೇಲ್ಕಂಡ ಆಸ್ಪತ್ರೆಗೆ ಡಾ॥ ಪ್ರಭಾಕರ್ ರೇವಣ್ಣ ಇವರನ್ನು ದಿನಾಂಕ 3-5-91ರಂದು ನೇಮಕ ಮಾಡಲಾಗಿತ್ತು. ಆದರೆ ಇವರು ಅಲ್ಲಿ ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ. ಆನಂತರ ತುಮಕೂರು ಜಿಲ್ಲಾ ಆಸ್ಪತ್ರೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಡಾ॥ ನಗರುಳ್ಳ ಇವರನ್ನು ಮೇಲ್ಕಂಡ ಆಸ್ಪತ್ರೆಗೆ ದಿನಾಂಕ 29-6-91ರಂದು ನೇಮಕ ಮಾಡಲಾಗಿತ್ತು. ಇವರೂ ಸಹ ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ. ಆದ್ದರಿಂದ ಡಾ॥ವೀರಪ್ಪನಂದಿಹಳ್ಳಿ ಎಂಬ ವೈದ್ಯರನ್ನು ಈ ಆಸ್ಪತ್ರೆಗೆ ನೇಮಕ ಮಾಡಿದ್ದು, ಇವರು ದಿನಾಂಕ 3-3-92ರಂದು ಮೇಲ್ಕಂಡ ಆಸ್ಪತ್ರೆಯಲ್ಲಿ ಹಾಜರಾಗಿ ದಿನಾಂಕ 25-3-92ರಿಂದ 23-4-92ರ ವರೆಗೆ ರಜೆ ಮಂಜೂರಾತಿ ಕೋರಿ ರಜೆಯ ಮೇಲೆ ಹೋದವರು ಇಂದಿನವರೆಗೂ ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ. ಅಂದಿನಿಂದ ಈ ಆಸ್ಪತ್ರೆಯಲ್ಲಿ ವೈದ್ಯರ ಹುದ್ದೆ ಖಾಲಿ ಇರುತ್ತದೆ. ಗೈರುಹಾಜರಾಗಿರುವ ವೈದ್ಯಾಧಿಕಾರಿಗಳ ವಿರುದ್ಧ ಕೂಡಲೇ ಶಿಸ್ತುಕ್ರಮವನ್ನು ಕೈಗೊಳ್ಳಲಾಗುವುದು. ತೀರ್ಥಪುರ, ಪ್ರಾಥಮಿಕ ಆರೋಗ್ಯಘಟಕಕ್ಕೆ ಈ ತಿಂಗಳ ಅಂತ್ಯದೊಳಗೆ ಒಬ್ಬ ಗುತ್ತಿಗೆ ವೈದ್ಯರನ್ನಾಗಲಿ ಅಥವಾ ಈ ತಿಂಗಳಲ್ಲಿ ಸ್ನಾತಕೋತ್ತರ ಶಿಕ್ಷಣವನ್ನು ಪೂರೈಸಿ ವಾಪಸ್ಸು ಬರುವ ವೈದ್ಯಾಧಿಕಾರಿಗಳಲ್ಲೊಬ್ಬರನ್ನು ತಪ್ಪದೆ ನೇಮಕ ಮಾಡಲಾಗುವುದು. ಈಗ ತಿಮ್ಮನಹಳ್ಳಿಯ ವೈದ್ಯಾಧಿಕಾರಿಗಳು ತೀರ್ಥಪುರ ಪ್ರಾಥಮಿಕ ಆರೋಗ್ಯ ಘಟಕದ ಪ್ರಬಾರೆಯಲ್ಲಿರುತ್ತಾರೆ.

<u>ಶಾಸನ ರಚನಾ ಕಾರ್ಯ ಕಲಾಪಗಳು</u>

<u>1993ರ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ತಿದ್ದುಪಡಿ) ಮಂಡನೆಗೆ ಅನುಮತಿ ಕೋರಿಕೆ ವಿಧೇಯಕ.</u>

ಶ್ರೀ ಚೌಡರೆಡ್ಡಿ : (ನಗರಾಭಿವೃದ್ಧಿ ಸಚಿವರು) ಸನ್ಮಾನ್ಯ ಅಧ್ಯಕ್ಷರೆ, ''1993ರ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.''

ಛೇರ್ಮನ್ : ಪ್ರಸ್ತಾವ ಏನೆಂದರೆ '' 1993ರ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.''

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು</u>

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ''1993ರ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.''

ಛೇರ್ಮನ್ : ವಿಧೇಯಕವನ್ನು ಮಂಡಿಸಲಾಗಿದೆ.

<u>1993ರ ಕರ್ನಾಟಕ ಮಿನುಗಾರಿಕೆ ಬಂದರು ಸರಹದ್ದು ಪ್ರಾಧಿಕಾರ (ತಿದ್ದುಪಡಿ) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ</u>